


## ಮರಣದಿಂದ ನಿರ್ವಾಣ

ಇಂದಿನ ಯುಗ ವೇಗದ ಯುಗ. ಎಲ್ಲವೂ ವೇಗವಾಗಿ ಆಗಬೇಕೆಂಬ ಆವೇಗ. ಆರೇ ತಿಂಗಳಲ್ಲಿ ಕೂಸು ಹುಟ್ಟಬೇಕು. ಹತ್ತೇ ನಿಮಿಷದಲ್ಲಿ ಅಡುಗೆ ಆಗಬೇಕು, ದಿಢೀರನೆ ಶ್ರೀಮಂತರಾಗಬೇಕು— ಹೀಗೆ ಎಲ್ಲ ವಿಷಯದಲ್ಲಿಯೂ ಆತುರ, ಕಾತರ. ಇದು ಧರ್ಮ ಕ್ಷೇತ್ರವನ್ನೂ ಬಿಟ್ಟಿಲ್ಲ. ದಿಢೀರ್ ಸಮಾಧಿಯನ್ನು ಬಯಸುವವರಿದ್ದಾರೆ. ಹಾಗೆಯೇ ದಿಢೀರ್ ನಿರ್ವಾಣವನ್ನೂ.

ಅನೇಕಜನ್ಮಸಂಸಿದ್ಧಃ ಜ್ಞಾನವಾನ್ ಮಾಂ ಪ್ರಪದ್ಯತೇ—"ಅನೇಕ ಜನ್ಮಗಳ ಸಾಧನೆಯ ಫಲವಾಗಿ ಜ್ಞಾನಿಯಾದವನು ನನ್ನನ್ನು ಪಡೆಯುತ್ತಾನೆ"—ಅಂದರೆ ನಿರ್ವಾಣವನ್ನು ಹೊಂದುತ್ತಾನೆ. ಇಂದಿನ ವೇಗದ ಯುಗದಲ್ಲಿ ಅನೇಕ ಜನ್ಮಗಳು ಇರಲಿ, ಅನೇಕ ವರ್ಷಗಳು ಕಾಯುವ ತಾಳ್ಮೆಯೂ ಇರುವುದಿಲ್ಲ. ಕಾಂಬೋಡಿಯಾದ ಬೌದ್ಧ ದೇವಸ್ಥಾನದಲ್ಲಿ ಸಂಭವಿಸಿದ ಒಂದು ಅಸಂಗತ ಘಟನೆಯು ಮಾನವನ ಈ ಶೋಚನೀಯ ಸ್ಥಿತಿಗೆ ಕನ್ನಡಿ ಹಿಡಿದಂತಿದೆ, ಪ್ರೇವೆಂಗ್ ಪ್ರಾಂತೀಯ ನಗರದಿಂದ ೨೦ ಕಿ.ಮೀ. ದೂರದಲ್ಲಿರುವ ದೇವಸ್ಥಾನದಲ್ಲಿ ದೊಡ್ಡ ಬೆಂಕಿ ಕಾಣಿಸಿಕೊಂಡಿತು. ಗಾಬರಿಯಿಂದ ಓಡಿ ಬಂದ ಜನರಿಗೆ ಒಂದು ಕೌತುಕ ಕಾದಿತ್ತು. ಹತ್ತಿರ ಹೋಗಿ ರಕ್ಷಿಸಲು ಸಾಧ್ಯವಾಗದಷ್ಟು ಹಬೆ. ಸ್ವೇ ರೋಯಿನ್ (Svay Roeun-50) ಮತ್ತು ಸಾತ್ ತುಆನ್ (Sat Thuon - 38) ಎಂಬ ಸಂನ್ಯಾಸಿನಿಯರೂ ಸೆಂಗ್ ಸೋನಾ (Seng Sona - 16) ಎಂಬ ಸಂನ್ಯಾಸಿಯೂ ತಮ್ಮನ್ನು ಕಂಬಗಳಿಗೆ ಬಿಗಿಸಿಕೊಂಡು ಸುತ್ತಲೂ ಘೋರ ಬೆಂಕಿ ಹಚ್ಚಿ ಅದಕ್ಕೆ ಅವರು ಆಹುತಿಯಾದರು. ಪೋಲಿಸರು ನೀಡಿರುವ ಮಾಹಿತಿಯ ಪ್ರಕಾರ ಈ ಆತ್ಮಾಹುತಿಗೆ ಕಾರಣ ನಿರ್ವಾಣವನ್ನು ಪಡೆಯುವ ಹೆಬ್ಬಯಕೆ. ಇದಕ್ಕೂ ಹಿಂದೆ ಮೂವರು ಸಂನ್ಯಾಸಿಗಳು ಚಾಕುವಿನಿಂದ ತಮ್ಮನ್ನು ತಿವಿದುಕೊಂಡು ನಿರ್ವಾಣವನ್ನು ಪಡೆಯುವ ವಿಫಲ ಸಾಹಸ ನಡೆಸಿದರಂತೆ. ಬಹುಶಃ ಅವರಿಗೆ ಮುಕ್ತಿಯ ಬದಲು ಜೈಲು ಬಂಧನ ದೊರೆತಿರಬೇಕು.

ತಲೆಕೆಳಕಾಗಿ ನಿಂತು ಘೋರ ತಪಸ್ಸಿನಲ್ಲಿ, ಸಾಧನೆಯಲ್ಲಿ ಜನುಮಗಳನ್ನು ಕಳೆದ ಋಷಿಮುನಿಗಳಿಗೆ ಮೋಕ್ಷ ಪಡೆಯಲು ಇಷ್ಟು ಸುಲಭದ ದಾರಿಕಾಣದೆ ಹೋಯಿತಲ್ಲ ಎಂಬ ವಿಷಾದವು ಮೂಡುತ್ತದೆ ಅಲ್ಲವೇ? ನಿರ್ವಾಣಕ್ಕಾಗಿ ಈ ವಿಕೃತ ವಿಧಾನವನ್ನು ಅನುಸರಿಸಲು ಕಾರಣವೇನಿರಬಹುದು? ಇಲ್ಲಿ ಮುಮುರ್ಷತ್ವವೇ (ಮರಣೇಚ್ಛೆ) ಮುಮುಕ್ಷತ್ವ ರೂಪದಲ್ಲಿ ಕಾಣಿಸಿಕೊಂಡಿರಬೇಕು. ಜೀವಿಸುವ ಬಯಕೆಯಂತೆ ಸಾವಿನ ಬಯಕೆಯೂ ಜನರಲ್ಲಿರುತ್ತದೆಂದು ಕೆಲವು ಮನಶ್ಶಾಸ್ತ್ರಜ್ಞರೂ ಅಭಿಪ್ರಾಯಪಡುತ್ತಾರೆ. ❖

## ಮಾಹಿತಿ ತಂದ ದುರ್ಗತಿ

ಅನಂತಪಾರಂ ಕಿಲ ಶಬ್ದಶಾಸ್ತ್ರಂ
ಸ್ವಲ್ಪಂ ತಥಾಯುರ್ಬಹವಶ್ಚ ವಿಘ್ನಾಃ ।
ಸಾರಂ ತತೋ ಗ್ರಾಹ್ಯಮಪಾಸ್ಯ ಫಲ್ಗುಂ
ಹಂಸೋ ಯಥಾ ಕ್ಷೀರಮಿವಾಂಬುಮಧ್ಯಾತ್ ॥

"ಶಾಸ್ತ್ರಗಳಾದರೂ ಅಪಾರ, ಆಯುಸ್ಸು ಮಾತ್ರ ಅಲ್ಪ ಮತ್ತು ವಿಘ್ನಗಳು ಅಸಂಖ್ಯ. ಹೀಗಿರುವಾಗ, ಹಂಸವು ನೀರನ್ನು ಬಿಟ್ಟು ಹಾಲನ್ನು ಮಾತ್ರ ಹೀರಿಕೊಳ್ಳುವಂತೆ ಶಾಸ್ತ್ರಗಳಲ್ಲಿ ನಿಸ್ಸಾರವಾದುದನ್ನು ಬಿಟ್ಟು ಸಾರವನ್ನು ಮಾತ್ರ ಗ್ರಹಿಸಬೇಕು"— ಎಂದು ಒಂದು ಸುಭಾಷಿತ ಹೇಳುತ್ತದೆ. ಶಾಸ್ತ್ರಗಳನ್ನು ಕುರಿತಾಗಿ ಹೇಳಿದ ಈ ಮಾತು ಇಂದಿನ ಮಾಹಿತಿಯುಗಕ್ಕೂ ಅನ್ವಯವಾಗುವಂತಾಗಿದೆ. ತೃಪ್ತಿಮೀರಿ ಮಾಹಿತಿಸಂಗ್ರಹದಿಂದ ಈಗ ಜನರಲ್ಲಿ ಜ್ಞಾನಕುತೂಹಲವೇ ಕಡಿಮೆಯಾಗುತ್ತಿದೆಯಂತೆ. ಅತಿಯಾದ ಮಾಹಿತಿಗೆ ಜ್ಞಾನದ ಕುತೂಹಲ ಆಹುತಿಯಾಗುತ್ತಿದೆ. ಇದರಿಂದ ಆಲೋಚನಾ ಶಕ್ತಿಯೇ ಕುಂಠಿತವಾಗುತ್ತದೆ. "ಕೇವಲ ಮಾಹಿತಿಯು, ಅದರ ಕೊರತೆಯಷ್ಟೇ, ಆಲೋಚನೆಗೆ ಬಾಧಕವಾಗುತ್ತದೆ" (*Information alone can be just as much an obstacle to thinking as the lack of it.*) ಎಂಬ ಎರಿಕ್ ಫ್ರೋಮ್‌ರ ಹೇಳಿಕೆ ಇಲ್ಲಿ ನೆನಪಿಗೆ ಬರುತ್ತದೆ.

ಪ್ರತಿದಿನ ೧೦,೦೦೦ ದಿಂದ ೩೦,೦೦೦ ವಾಣಿಜ್ಯ ಸಂದೇಶಗಳನ್ನು ಅಮೆರಿಕದ ನಗರವಾಸಿಗಳ ತಲೆಗೆ ತುಂಬಿಸಲಾಗುತ್ತದಂತೆ! ಇವಲ್ಲದೆ ಸುಮಾರು ೩೦೦ ದೂರವಾಣಿ, ಇ-ಮೇಲ್ ಮುಂತಾದುವುಗಳ ಮೂಲಕ ಬರುವ ವೈಯಕ್ತಿಕ ಸಂದೇಶಗಳಿರುತ್ತವೆ. ನಮ್ಮ ಇಂದ್ರಿಯಗಳಲ್ಲೇ ಮಾಹಿತಿಗಳನ್ನು ಸೋಸಿ ಬೇಕಾದ್ದನ್ನು ಮಾತ್ರ ಒಳಗೆ ಬಿಡುವ ಒಂದು ವ್ಯವಸ್ಥೆ ಇದೆಯಂತೆ. ಆದರೆ ಈಗ ಆ ಬಲೆಯನ್ನು ಹರಿದುಕೊಂಡು ಮಾಹಿತಿಗಳ ಪ್ರವಾಹ ಒಳನುಗ್ಗುತ್ತಿವೆಯಂತೆ.

ನಾವು ಎಲ್ಲ ವಿಷಯದಲ್ಲೂ ವಿವೇಕಿಗಳಾಗಬೇಕು. ಜೀವನದಲ್ಲಿ ನಿರ್ದಿಷ್ಟವಾದ ಗುರಿ ಮತ್ತು ಆದರ್ಶವನ್ನು ಇಟ್ಟುಕೊಂಡು ಅವಕ್ಕೆ ಪೂರಕವಾದುದನ್ನು ಮಾತ್ರ ಸ್ವೀಕರಿಸಿ ಉಳಿದುವನ್ನು ಕಡೆಗಣಿಸುವ ಸಾಮರ್ಥ್ಯವನ್ನು ಪಡೆಯಬೇಕು. ಇದು ಮಾಹಿತಿಗೂ ಅನ್ವಯಿಸುತ್ತದೆ. ಬೇಕು-ಬೇಡದ ಮಾಹಿತಿಗಳನ್ನೆಲ್ಲ ಸ್ವೀಕರಿಸಿ ನಮ್ಮ ಮನಸ್ಸನ್ನು ಒಂದು ಕಸದ ಬುಟ್ಟಿಯಾಗಿ ಮಾಡಿಕೊಳ್ಳಬಾರದು. ಎಲ್ಲವನ್ನೂ ಅರಿತು ಏನೂ ತಿಳಿಯದವರಂತೆ ಆಗಬಾರದು. ❖